ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 04–09–2020**

# ಪತ್ರಿಕಾ ಪ್ರಕಟಣೆ

## ಶಿಕ್ಷಕರಿಗಾಗಿ "ಭಾರತದ ಬಾಹ್ಯಾಕಾಶ ಪ್ರಯಾಣ" ಉಪನ್ಯಾಸ

**ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):**

ರಾಜ್ಯದ ಎಲ್ಲಾ ಶಿಕ್ಷಕರಿಗೆ "ಭಾರತದ ಬಾಹ್ಯಾಕಾಶ ಪ್ರಯಾಣ" ವಿಷಯದ ಕುರಿತು ಮಾಜಿ ಇಸ್ರೋ ಅಧ್ಯಕ್ಷರಾದ ಎ. ಎಸ್. ಕಿರಣಕುಮಾರ ಅವರಿಂದ ವಿಜ್ಞಾನ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಸೆಪ್ಟೆಂಬರ್ 5 ರ ಶಿಕ್ಷಕರ ದಿನಾಚರಣೆಯಂದು ಸಂಜೆ 5:00 ಆನ್‌ಲೈನ್ ಆಧರಿತ ವಿಜ್ಞಾನ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ತಮ್ಮ ಹೆಸರನ್ನು ನೊಂದಾಯಿಸಿಕೊಂಡು ಹಾಗೂ Zoom App ಹಾಗೂ ತಾರೇಜಮೀನ್ ಪರ್ ಸಂಸ್ಥೆಯ Youtube ಮೂಲಕ ಉಪನ್ಯಾಸದಲ್ಲಿ ಭಾಗವಹಿಸಬಹುದು.

ಸೀಮಿತ ಸಂಖ್ಯೆಯ ಶಿಕ್ಷಕರಿಗೆ ಅವಕಾಶವಿದ್ದು ಪಾಲ್ಗೊಳ್ಳ ಬಯಸುವವರು https//tinyurl.com/tzpchannel/ ಮೂಲಕ ಉಚಿತವಾಗಿ ನೊಂದಣಿ ಮಾಡಿಸಿಕೊಳ್ಳಬಹುದು. ತಾರೇಜಮೀನ್ ಪರ್ ಡಿಜಿಟಲ್ ಸಂಚಾರಿ ತಾರಾಲಯದ ಎಲ್ಲಾ ವಿಜ್ಞಾನ ಸರಣಿ ಉಪನ್ಯಾಸ ಕಾರ್ಯಕ್ರಮಗಳನ್ನು ತಾರೇಜಮೀನ್ ಪರ್ ಸಂಸ್ಥೆಯ ಯುಟ್ಯೂಬ್ ಹಾಗೂ ಫೇಸ್‌ಬುಕ್ ಪೇಜ್‌ನಲ್ಲಿ ವೀಕ್ಷಿಸಬಹುದು.

ಹೆಚ್ಚಿನ ಮಾಹಿತಿಗಾಗಿ: 09480843497/9035013642 ಸಂಖ್ಯೆಗೆ ಕಾಲ್ ಮಾಡಬುದಾಗಿದೆ ಅಥವಾ mail us: info@tarezameenpar.com visit us: www.tarezameenpar.com ಬೇಟಿ ನೀಡಬಹುದು.

ಈ ಉಪನ್ಯಾಸ ಕಾರ್ಯಕ್ರಮವನ್ನು ತಾರೇ ಜಮೀನ್ ಪರ್ ಡಿಜಿಟಲ್ ಸಂಚಾರಿ ತಾರಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಇದುವರೆಗೂ 6 ವಿಜ್ಞಾನ ಸರಣಿ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಇದೇ ತಿಂಗಳ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯ ಅಂಗವಾಗಿ 7ನೇ ವಿಜ್ಞಾನ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಒಂದು ವಿಜ್ಞಾನ ಉಪನ್ಯಾಸ ಕಾರ್ಯಕ್ರಮದ ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿ ಇಸ್ರೋದ ನಿಕಟಪೂರ್ವ ಅಧ್ಯಕ್ಷರಾದ ಎ. ಎಸ್ ಕಿರಣಕುಮಾರರವರು "ಭಾರತದ ಬಾಹ್ಯಾಕಾಶ ಪ್ರಯಾಣ" ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಲಿದ್ದಾರೆ.

## Special lecture series with former ISRO Chairman A S Kiran Kumar

Bengaluru, September 4 (Karnataka Information)

The purpose of a teacher is not to increase the amount of knowledge but to create the possibilities for a child to invent and discover, A good teacher always inspires hope, ignite the imagination, and instill the love of learning. Happy Teacher's Day.

We invite all of you for the Teacher's Day special lecture series with former ISRO Chairman, A S Kiran Kumar, on this Teachers' Day.

About Speaker: A S Kiran Kumar, is an Indian space scientist and former chairman of the Indian Space Research Organisation, Former Director of Ahmadabad Space Applications Centre. He is credited with the development of key scientific instruments aboard the Chandrayaan-1 and Mangalyaan space crafts. In 2014, Kiran Kumar was awarded the Padma Shri, India's fourth highest civilian award, for his contributions to the fields of science and technology. Webinar Topic: ಭಾರತದ ಬಾಹ್ಯಾಕಾಶ ಪ್ರಯಾಣ(India's Space Travel ) Date & Time : Saturday, 5th September at 5PM - 6PM

## <u>ಕರ್ನಾಟಕ ಯಕ್ಷಗಾನ ಅಕಾಡೆಮಿ 2019ನೇ ಸಾಲಿನ ಪ್ರಶಸ್ತಿ ಪ್ರಕಟ ಅಕ್ಟೋಬರ್‌ನಲ್ಲಿ ಪ್ರಶಸ್ತಿ ಪ್ರಧಾನ</u>

**ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):**

ಕರ್ನಾಟಕ ಯಕ್ಷಗಾನ ಅಕಾಡೆಮಿಯು 2019 ನೇ ಸಾಲಿನ ವಿವಿಧ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಪ್ರತಿಷ್ಠಿತ ಪಾರ್ತಿಸುಬ್ಬ ಪ್ರಶಸ್ತಿಗೆ ಹಾಗೂ 5 ಜನ ಗಣ್ಯರನ್ನು ವಾರ್ಷಿಕ ಗೌರವ ಪ್ರಶಸ್ತಿಗೆ, 10 ಜನ ಗಣ್ಯರನ್ನು ಯಕ್ಷಸಿರಿ ವಾರ್ಷಿಕ ಪ್ರಶಸ್ತಿಗೆ ಹಾಗೂ ಪುಸ್ತಕ ಬಹುಮಾನಕ್ಕೆ 3 ಜನ ಗಣ್ಯರನ್ನು ಆಯ್ಕೆ ಮಾಡಿ ಪ್ರಕಟಿಸಿದೆ.

**"ಪಾರ್ತಿಸುಬ್ಬ ಪ್ರಶಸ್ತಿ, ಗೌರವ ಪ್ರಶಸ್ತಿ, ಯಕ್ಷಸಿರಿ ವಾರ್ಷಿಕ ಮತ್ತು ಪುಸ್ತಕ ಬಹುಮಾನ" ಪ್ರಶಸ್ತಿ ಪ್ರದಾನ ಸಮಾರಂಭ'ವನ್ನು** ಕೋವಿಡ್-19ರ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಮಾಸ್ಕ ಧರಿಸಿ ಕಡಿಮೆ ಜನರೊಂದಿಗೆ 4 ವಿಭಾಗಗಳಲ್ಲಿ 19 ಜನ ಪ್ರಶಸ್ತಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನವನ್ನು 2020ರ ಅಕ್ಟೋಬರ್ ತಿಂಗಳಿನಲ್ಲಿ ನಡೆಸಲಾಗುವುದು.

ಶ್ರೀ ಅಂಬಾತನಯ ಮುದ್ರಾಡಿ ಅವರನ್ನು **'ಪಾರ್ತಿಸುಬ್ಬ ಪ್ರಶಸ್ತಿ'ಗೆ** ಆಯ್ಕೆ ಮಾಡಲಾಗಿದೆ. ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತರಿಗೆ ರೂ.1.00ಲಕ್ಷ ಮೊತ್ತವನ್ನು, ಪ್ರಶಸ್ತಿ ಫಲಕ, ಪ್ರಮಾಣ ಪತ್ರ, ಹಾರ, ಶಾಲು ಪೇಟ ಹಾಗೂ ಫಲತಾಂಬೂಲಗಳನ್ನು ನೀಡಿ ಪುರಸ್ಕರಿಸಲಾಗುವುದು.

**'ಗೌರವ ಪ್ರಶಸ್ತಿ'**ಗೆ 5 ಜನ ಗಣ್ಯರನ್ನು (ಶ್ರೀ ಚಂದ್ರಶೇಖರ್ ದಾಮ್ಲೆ, ಡಾ. ಆನಂದರಾಮ ಉಪಾಧ್ಯ, ಶ್ರೀ ರಾಮಕೃಷ್ಣ ಗುಂದಿ, ಶ್ರೀ ಕೆ.ಸಿ.ನಾರಾಯಣ, ಶ್ರೀ ಚಂದ್ರು ಕಾಳೇನಹಳ್ಳಿ) ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿ ಪುರಸ್ಕೃತರಿಗೆ ತಲಾ ರೂ.50,000/-ಗಳ ಮೊತ್ತವನ್ನು, ಪ್ರಶಸ್ತಿ ಫಲಕ, ಪ್ರಮಾಣ ಪತ್ರ, ಹಾರ, ಶಾಲು ಪೇಟ ಹಾಗೂ ಫಲತಾಂಬೂಲಗಳನ್ನು ನೀಡಿ ಪುರಸ್ಕರಿಸಲಾಗುವುದು.

**'ಯಕ್ಷಸಿರಿ ವಾರ್ಷಿಕ ಪ್ರಶಸ್ತಿ'ಗೆ** 10 ಜನ ಗಣ್ಯರನ್ನು (ಶ್ರೀ ನೆಲ್ಲೂರು ಜನಾರ್ದನ ಆಚಾರ್ಯ, ಶ್ರೀ ಉಬರಡ್ಕ ಉಮೇಶ ಶೆಟ್ಟಿ, ನಿಡ್ಲೆ, ಶ್ರೀ ಕುರಿಯ ಗಣಪತಿ ಶಾಸ್ತ್ರಿ, ಶ್ರೀ ಆರ್ಗೋಡು ಮೋಹನದಾಸ್ ಶೆಣೈ, ಶ್ರೀ ಮಹಮ್ಮದ್ ಗೌಸ್, ಶ್ರೀ ರಾಮಚಂದ್ರ ಹೆಗಡೆ, ಶ್ರೀ ಎಂ.ಎನ್.ಹೆಗಡೆ, ಶ್ರೀ ಹಾರಾಡಿ ಸರ್ವೋತ್ತಮ ಗಾಣಿಗ, ಶ್ರೀ ಮುಖವೀಣೆ ರಾಜಣ್ಣ, ಶ್ರೀ ಎ.ಜಿ.ಅಶ್ವಥ ನಾರಾಯಣ) ಅವರುಗಳನ್ನು ಆಯ್ಕೆ ಮಾಡಲಾಗಿದೆ. ಯಕ್ಷಸಿರಿ ಪ್ರಶಸ್ತಿ ಪುರಸ್ಕೃತರಿಗೆ ತಲಾ ರೂ.25,000/-ಗಳ ಮೊತ್ತವನ್ನು ಪ್ರಮಾಣ ಪತ್ರ, ಹಾರ, ಶಾಲು, ಪೇಟ ನೀಡಿ ಪುರಸ್ಕರಿಸಲಾಗುವುದು.

**'ಪುಸ್ತಕ ಬಹುಮಾನ'ಕ್ಕೆ** 3 ಜನ ಗಣ್ಯರನ್ನು (ಶ್ರೀ ಹೊಸ್ತೋಟ ಮಂಜುನಾಥ ಭಾಗವತ್, ಶ್ರೀ ಕೃಷ್ಣಪ್ರಕಾಶ ಉಳಿತ್ತಾಯ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ) ಅವರುಗಳನ್ನು ಆಯ್ಕೆ ಮಾಡಲಾಗಿದೆ. ಪುಸ್ತಕ ಬಹುಮಾನ ಪುರಸ್ಕೃತರಿಗೆ ತಲಾ ರೂ.25,000/-ಗಳ ಮೊತ್ತವನ್ನು ಪ್ರಮಾಣ ಪತ್ರ, ಹಾರ, ಶಾಲು, ಪೇಟ ನೀಡಿ ಪುರಸ್ಕರಿಸಲಾಗುವುದು.

1. **ಪಾರ್ತಿಸುಬ್ಬ ಪ್ರಶಸ್ತಿ, ಯಕ್ಷಸಿರಿ ಮತ್ತು ಗೌರವ ಪ್ರಶಸ್ತಿ – ಕೊಲ್ಲೂರು ಮೂಕಾಂಬಿಕ ದೇವಸ್ಥಾನದ ಹಾಲ್**
   [ಶ್ರೀ ಅಂಬಾತನಯ ಮುದ್ರಾಡಿ, ಉಡುಪಿ, ಶ್ರೀ ಮಹಮ್ಮದ್ ಗೌಸ್, ಉಡುಪಿ, ಶ್ರೀ ಆರ್ಗೋಡು ಮೋಹನದಾಸ್ ಶೆಣೈ, ಕಮಲಶಿಲೆ, ಶ್ರೀ ಹಾರಾಡಿ ಸರ್ವ ಗಾಣಿಗ, ಶ್ರೀ ನೆಲ್ಲೂರು ಜನಾರ್ಧನ ಆಚಾರ್ಯ, ಚಿಕ್ಕಮಗಳೂರು]
2. **ಯಕ್ಷಸಿರಿ, ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನ – ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಚಾವಡಿ**
   [ಶ್ರೀ ಚಂದ್ರಶೇಖರ್ ದಾಮ್ಲೆ, ಸುಳ್ಯ, ಶ್ರೀ ಉಬರಡ್ಕ ಉಮೇಶ ಶೆಟ್ಟಿ, ಸುಳ್ಯ, ಶ್ರೀ ಕುರಿಯ ಗಣಪತಿ ಶಾಸ್ತ್ರಿ, ಕಾಸರಗೋಡು, ಶ್ರೀ ಹೊಸ್ತೋಟ ಮಂಜುನಾಥ ಭಗವತ್-ಶ್ರೀ ಗುರುದೇವ ಪ್ರಕಾಶನ, ಒಡೆಯೂರು, ಶ್ರೀ ಕೃಷ್ಣಪ್ರಕಾಶ ಉಳಿತ್ತಾಯ, ಮಂಗಳೂರು]
3. **ಯಕ್ಷಸಿರಿ ಮತ್ತು ಗೌರವ ಪ್ರಶಸ್ತಿ – ಗುಬ್ಬಿ ವೀರಣ್ಣ ರಂಗಮಂದಿರ, ತುಮಕೂರು**
   [ಡಾ. ಆನಂದರಾಮ ಉಪಾಧ್ಯ, ಬೆಂಗಳೂರು, ಶ್ರೀ ಚಂದ್ರು ಕಾಳೇನಹಳ್ಳಿ, ಚನ್ನರಾಯಪಟ್ಟಣ, ಶ್ರೀ ಕೆ.ಸಿ.ನಾರಾಯಣ, ಬೆಂಗಳೂರು ಗ್ರಾಮಾಂತರ, ಶ್ರೀ ಬಿ. ರಾಜಣ್ಣ, ತುಮಕೂರು, ಶ್ರೀ ಎ.ಜಿ. ಅಶ್ವತ್ಥ ನಾರಾಯಣ, ತುಮಕೂರು, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ತುಮಕೂರು]
4. **ಯಕ್ಷಸಿರಿ ಮತ್ತು ಗೌರವ ಪ್ರಶಸ್ತಿ – ಪುರಭವನ, ಕುಮುಟ, ಉತ್ತರ ಕನ್ನಡ**
   [ಶ್ರೀ ರಾಮಕೃಷ್ಣ ಗುಂದಿ, ಉತ್ತರ ಕನ್ನಡ, ಶ್ರೀ ಮೂರೂರು ರಾಮಚಂದ್ರ ಹೆಗಡೆ, ಮೂರೂರು, ಶ್ರೀ ಎಂ.ಎನ್. ಹೆಗಡೆ, ಹಳವಳ್ಳಿ, ಉತ್ತರ ಕನ್ನಡ]

## ಸೂರ್ಯನಗರ 4ನೇ ಹಂತದ ಅತಿ ದೊಡ್ಡ ವಸತಿ ಬಡಾವಣೆಗೆ ಹಸಿರು ನಿಶಾನೆ – ಸಚಿವ ಸೋಮಣ್ಣ

ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):

ಬೆಂಗಳೂರಿನ ಸೂರ್ಯನಗರ 4ನೇ ಹಂತದಲ್ಲಿ ನಿರ್ಮಾಣವಾಗುತ್ತಿರುವ ಅತಿ ದೊಡ್ಡ 'ಪ್ರಧಾನ ಮಂತ್ರಿಗಳ ವಸತಿ ಬಡಾವಣೆ" ನಿರ್ಮಾಣ ಕಾರ್ಯಕ್ಕೆ ಸಚಿವ ಸಂಪುಟದ ಸಭೆಯಲ್ಲಿ ಹಸಿರು ನಿಶಾನೆ ದೊರಕಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಸಚಿವ ಸೋಮಣ್ಣನವರು 2008–13ರ ಅವಧಿಯಲ್ಲಿ ವಸತಿ ಸಚಿವರಾಗಿದ್ದಾಗ ಸೂರ್ಯನಗರ 4ನೇ ಹಂತದ ಟೌನ್‌ಶಿಪ್ ನಿರ್ಮಾಣಕ್ಕಾಗಿ 2013ರಲ್ಲಿ ಭೂಸ್ವಾಧೀನದ ಪ್ರಾಥಮಿಕ ಅಧಿಸೂಚನೆ ಹೊರಬಿದ್ದಿದ್ದರೂ ಜಮೀನು ಸಂಗ್ರಹ ಕಗ್ಗಂಟಾಗಿ ಪರಿಣಮಿಸಿ 1938 ಎಕರೆ ಪ್ರದೇಶದಲ್ಲಿ 30,000 ನಿವೇಶನಗಳನ್ನು ಅಭಿವೃದ್ಧಿಪಡಿಸುವ ಪ್ರತಿಷ್ಠಿತ ಯೋಜನೆ ಕುಂಠಿತಗೊಂಡಿತ್ತು.

ಪ್ರಸ್ತುತ ಸರ್ಕಾರದಲ್ಲಿ ಸೋಮಣ್ಣನವರು ವಸತಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಭೂಮಾಲೀಕರೊಂದಿಗೆ ಸರಣಿ ಸಭೆ ನಡೆಸಿ ಶೇ.50:50ರ ಅನುಪಾತದಲ್ಲಿ ಭೂಮಿ ಪಡೆಯಲು ಭೂಮಾಲೀಕರ ಮನ ಒಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಳೆದ 7 ವರ್ಷದಿಂದ ಇತ್ತ ಪರಿಹಾರವೂ ದೊರೆಯದೇ, ಅತ್ತ ಭೂಮಿಯೂ ಇಲ್ಲದೇ ಅತಂತ್ರರಾಗಿದ್ದ ಭೂಮಾಲೀಕರ ಸಂಕಷ್ಟಕ್ಕೆ ಕೊನೆಗೂ ಸರ್ಕಾರ ಸ್ಪಂದಿಸಿ ಅವರ ಬೇಡಿಕೆಯಂತೆ ಪ್ರತಿ ಎಕರೆಗೆ 20.00 ಲಕ್ಷ ರೂಪಾಯಿಗಳ ಮುಂಗಡ ನೀಡಲು ಸಹ ಇಂದಿನ ಸಚಿವ ಸಂಪುಟ ಅನುಮೋದನೆ ನೀಡಿದೆ.

ಸಚಿವರ ಈ ದಿಟ್ಟ ಕ್ರಮಗಳಿಂದಾಗಿ ಕರ್ನಾಟಕ ಗೃಹ ಮಂಡಳಿಯು ಪ್ರತಿಷ್ಠಿತ, ವಿಶ್ವದರ್ಜೆಯ ಪ್ರಧಾನಮಂತ್ರಿ ಟೌನ್‌ಶಿಪ್ ನಿರ್ಮಾಣಕ್ಕೆ ಮುಂದಡಿ ಇಟ್ಟಿದೆ. ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಭೂಸ್ವಾಧೀನವನ್ನು ಕೈಗೊಂಡಿದ್ದರೆ ಈ ಯೋಜನೆಗೆ ಸುಮಾರು ರೂ.4,200 ಕೋಟಿ ವೆಚ್ಚ ಭರಿಸಬೇಕಿತ್ತು. ಆದರೇ, ಈಗ ಇದೇ ಯೋಜನೆಯನ್ನು ಪಾಲುದಾರಿಕೆಯಲ್ಲಿ ಕೇವಲ ರೂ.1,910 ಕೋಟಿಗಳಲ್ಲಿ ಅನುಷ್ಠಾನಗೊಳಿಸುತ್ತಿರುವುದರಿಂದ ಮಂಡಳಿಗೂ ಲಾಭದಾಯಕವಾದ ಹಾಗೂ ಭೂಮಾಲೀಕರಿಗೂ ಅನುಕೂಲವಾಗಿರುವ ಈ ಕ್ರಮವು ಚರಿತ್ರಾರ್ಹ ಸಾಧನೆಯಾಗಿದೆ. ಅಲ್ಲದೇ, ಈ ಯೋಜನೆಯ ಅನುಷ್ಠಾನದಿಂದ ಕರ್ನಾಟಕ ಗೃಹ ಮಂಡಳಿಯ ವರ್ಚಸ್ಸು ಯಾವುದೇ ರಿಯಲ್ ಎಸ್ಟೇಟ್ ಕಂಪೆನಿಗೆ ಕಡಿಮೆ ಇಲ್ಲದಂತೆ ವೃದ್ಧಿಸಲಿದೆ.

ಮಂಡಳಿಯ ಮಹತ್ವಪೂರ್ಣ ಯೋಜನೆಯೊಂದರ ಯಶಸ್ವಿಗೆ ಕಗ್ಗಂಟಾಗಿದ್ದ ಸಮಸ್ಯೆಯೊಂದಕ್ಕೆ ಇಂದಿನ ಸಚಿವ ಸಂಪುಟದ ನಿರ್ಧಾರ ತಾರ್ಕಿಕ ಅಂತ್ಯ ನೀಡಿರುವುದಕ್ಕೆ ಹರ್ಷ ವ್ಯಕ್ತಪಡಿಸಿದ ಸಚಿವ ಸೋಮಣ್ಣ ಇದಕ್ಕಾಗಿ ಕಾರಣರಾದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಸಂಪುಟ ಸಹೋದ್ಯೋಗಿಗಳು ಹಾಗೂ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಇದೇ ಸಂದರ್ಭದಲ್ಲಿ ಕೃತಜ್ಞತೆ ಸಲ್ಲಿಸಿದ್ದಾರೆ.

## ಮೈಸೂರು ಬಳಿಯ ಕೆ.ಆರ್.ಎಸ್ ನಿಸರ್ಗ ವಸತಿ ಯೋಜನೆಯ ಸ್ಥಗಿತಗೊಂಡಿದ್ದ ಕಾಮಗಾರಿಗೆ ಚಾಲನೆ

**ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):** ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯ ವಿವಿಧ ಗ್ರಾಮದ **469** ಎಕರೆ ಪ್ರದೇಶದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿದ ಕೆ.ಆರ್.ಎಸ್ ನಿಸರ್ಗ ವಸತಿ ಯೋಜನೆಗೆ ಸಂಬಂಧಿಸಿದಂತೆ ಸಚಿವ ಸಂಪುಟ ಭೂಮಾಲೀಕರಿಗೆ ಸಾಂತ್ವನ ನಿವೇಶನ ನೀಡುವ ಮಹತ್ವದ ನಿರ್ಧಾರ ಕೈಗೊಂಡಿದೆ.

ಸಚಿವ ಸೋಮಣ್ಣನವರು **2008-13**ರ ಅವಧಿಯಲ್ಲಿ ವಸತಿ ಸಚಿವರಾಗಿದ್ದಾಗ ಈ ಯೋಜನೆಯನ್ನು ಕೈಗೆತ್ತಿಕೊಂಡು ಈ ಬಡಾವಣೆಯಲ್ಲಿ ಸುಮಾರು **6,500** ವಿವಿಧ ವರ್ಗದ ನಿವೇಶನಗಳನ್ನು ಅಭಿವೃದ್ಧಿಪಡಿಸಿ **ಶೇ.90ರಷ್ಟು** ಕಾಮಗಾರಿ ಪೂರ್ಣಗೊಳಿಸಲಾಗಿತ್ತು. ಆದರೇ, ಭೂಮಿ ಕಳೆದುಕೊಂಡ ರೈತರು ಸಾಂತ್ವನ ನಿವೇಶನಕ್ಕಾಗಿ ಹಕ್ಕೋತ್ತಾಯಿಸಿ ಯೋಜನೆಯ ಅನುಷ್ಠಾನಕ್ಕೆ ಅಡ್ಡಿಪಡಿಸಿದ ಪರಿಣಾಮ **2015ರಿಂದ 2019ರವರೆಗೆ** ಕಾಮಗಾರಿ ಸ್ಥಗಿತಗೊಂಡಿತ್ತು.

ಭೂಮಿ ಕಳೆದುಕೊಂಡ ರೈತರಿಗೆ ಅರ್ಧ ಎಕರೆಗೆ **6X9** ಮೀ. ಅಳತೆಯ ಒಂದು ನಿವೇಶನ ಹಾಗೂ ಎಕರೆಯೊಂದಕ್ಕೆ **9X12** ಮೀ. ಅಳತೆಯ ನಿವೇಶನವನ್ನು ಕ್ರಮವಾಗಿ **ರೂ.50,000/-** ಹಾಗೂ **ರೂ.1,00,000/-** ಪಾವತಿಸಿಕೊಂಡು ಸಾಂತ್ವನ ನಿವೇಶನವಾಗಿ ನೀಡುವ ಇಂದಿನ ಸಚಿವ ಸಂಪುಟ ನಿರ್ಧಾರದಿಂದ **2015ರಿಂದ** ಕಗ್ಗಂಟಾಗಿ ಪರಿಣಮಿಸಿದ್ದ ಭೂಮಾಲೀಕರ ವಿವಾದಕ್ಕೆ ಪರಿಹಾರ ಸಿಕ್ಕಿದೆ.

ಅಲ್ಲದೇ, ಇದರಿಂದ ಯೋಜನೆಯು ಪುನರಾರಂಭಗೊಂಡು ಹಂಚಿಕೆಯಾಗದೇ ಬಾಕಿ ಉಳಿದ ಸುಮಾರು **2,500** ವಿವಿಧ ಸ್ವತ್ತುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡುವುದರಿಂದ ಕರ್ನಾಟಕ ಗೃಹ ಮಂಡಳಿಗೆ **ರೂ.260** ಕೋಟಿ ಆದಾಯ ಬರಲಿದೆ ಎಂದು ಸಚಿವ, ಸೋಮಣ್ಣ ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

## ಪ್ರವಾಹ ಪೀಡಿತ ಕೊಡಗು ಜಿಲ್ಲೆಗೆ ಸೂಕ್ತ ಪರಿಹಾರ- ಮುಖ್ಯಮಂತ್ರಿಗಳಿಗೆ ಉಸ್ತುವಾರಿ ಸಚಿವ ಸೋಮಣ್ಣ ಪತ್ರ

**ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ): ಇತ್ತೀಚೆಗೆ ಜಲಪ್ರಳಯದಿಂದ ನಲುಗಿರುವ ಕೊಡಗು ಜಿಲ್ಲೆಗೆ ಅತಿವೃಷ್ಟಿಯಿಂದ ಶಾಶ್ವತ ಪರಿಹಾರ, ಬೆಳೆ ಹಾನಿ ಮತ್ತು ಮೂಲಸೌಕರ್ಯದ ಹಾನಿಗೆ ಸಂಬಂಧಿಸಿದಂತೆ ಕೂಡಲೇ ಪರಿಹಾರ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಯವರಿಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ಪತ್ರ ಮುಖೇನ ಮನವಿ ಸಲ್ಲಿಸಿದ್ದಾರೆ.**

ಈ ಬಗ್ಗೆ ವಿವರವಾಗಿ ಪತ್ರ ಬರೆದ ಸಚಿವ ಸೋಮಣ್ಣ ಜಿಲ್ಲೆಯಲ್ಲಿ 91 ಗ್ರಾಮಗಳು ಮಳೆಯಿಂದ ಉಂಟಾದ ಪ್ರವಾಹಕ್ಕೆ ತುತ್ತಾಗಿದ್ದು, ಒಟ್ಟಾರೆ ಜಿಲ್ಲೆಯಲ್ಲಿ ಸುಮಾರು 41,026 ಹೆಕ್ಟೇರ್ ಬೆಳೆಹಾನಿ, ಅಂದಾಜು ರೂ.415.00 ಕೋಟಿಗಳ ಮೂಲಸೌಕರ್ಯ ಹಾನಿಯಾಗಿದ್ದು, ಹಾನಿಗೀಡಾದ ರಸ್ತೆ, ಸೇತುವೆ, ಇತ್ಯಾದಿ ಮೂಲ ಸೌಕರ್ಯಗಳ ದುರಸ್ಥಿ ಹಾಗೂ ಪುನರ್‌ನಿರ್ಮಾಣ ಸಮರೋಪಾದಿಯಲ್ಲಿ ಮಾಡಬೇಕು.

ಜೊತೆಗೆ ರೈತರ ಜಮೀನಿನಲ್ಲಿ ಸಂಗ್ರಹವಾದ ಮರಳನ್ನು ರಾಯಲ್ಟಿ ಇಲ್ಲದೇ ಮಾರಾಟ ಮಾಡಲು ಭೂಮಾಲೀಕ ರೈತರಿಗೆ ಅವಕಾಶ ನೀಡಬೇಕು ಹಾಗೂ ಕಾಫಿ ಬೆಳೆಗಾರರ ತೋಟದಲ್ಲಿ ಬಿದ್ದಿರುವ ಬೆಲೆ ಬಾಳುವ ಮರಗಳನ್ನು ಹೊರತುಪಡಿಸಿ ಇತರೇ ಮರಗಳನ್ನು ಮಾರಾಟ ಮಾಡಲು ಅದೇ ರೈತರಿಗೆ ಅವಕಾಶ ನೀಡಬೇಕು. ಅಲ್ಲದೇ, ಹಿಂದಿನ ಸಾಲಿನಲ್ಲಿ ಘೋಷಣೆಯಾದ ಪ್ರವಾಹ ಪ್ಯಾಕೇಜ್ ರೂ.536.00 ಕೋಟಿಗಳ ಪೈಕಿ ಬಿಡುಗಡೆಗೆ ಬಾಕಿ ಇರುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದೂ ಸಹಾ ಪತ್ರದಲ್ಲಿ ವಿವರಿಸಿದ್ದಾರೆ. ಮುಂದುವರೆದು, ಜಿಲ್ಲೆಯು ಪದೇ ಪದೇ ಪ್ರಕೃತಿ ವಿಕೋಪಕ್ಕೆ ತುತ್ತಾಗುತ್ತಿದ್ದು, ಅಪಾರ ಪ್ರಮಾಣದಲ್ಲಿ ಮಳೆ ಸುರಿಯುತ್ತಿರುವುದರಿಂದ ಮೂರು ತಾಲ್ಲೂಕುಗಳನ್ನು ಅತಿವೃಷ್ಠಿಪೀಡಿತವೆಂದು ಘೋಷಿಸಬೇಕು ಎಂದೂ ಸಹಾ ಆಗ್ರಹಿಸಿದ್ದಾರೆ.

ಸಚಿವ ಸೋಮಣ್ಣನವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಮಾನ್ಯ ಮುಖ್ಯ ಮಂತ್ರಿಯವರು ಈ ಬಗ್ಗೆ ಕೂಡಲೇ ಸೂಕ್ತ ಆದೇಶವನ್ನು ಸರ್ಕಾರದಿಂದ ಹೊರಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳದಲ್ಲಿಯೇ ಸೂಚನೆ ನೀಡಿರುವುದಾಗಿ ತಿಳಿದು ಬಂದಿದೆ.

## ಬಿಬಿಎಂಪಿ ವ್ಯಾಪ್ತಿಯಲ್ಲಿ ಮರಣ ನೋಂದಣಿ-ವರದಿ

ಬೆಂಗಳೂರು, ಸೆಪ್ಟೆಂಬರ್ 4, ಕರ್ನಾಟಕ ವಾರ್ತೆ :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2019 ರ ಜನವರಿ-ಜುಲೈ ತಿಂಗಳವರೆಗೆ ನೋಂದಣಿಯಾದ ಮರಣ ಸಂಖ್ಯೆಗಳನ್ನು 2020 ರ ಸಾಲಿನ ಅದೇ ತಿಂಗಳುಗಳಲ್ಲಿ ನೋಂದಣಿಯನ್ನು ಹೋಲಿಸಿ ನೋಡಿದಾಗ ಕಡಿಮೆ ಇದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಂಖ್ಯಿಕ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಬೆಂಗಳೂರು ನಗರದಲ್ಲಿ 2020 ಜನವರಿ ಮಾಹೆಯಿಂದ ಜುಲೈ ಮಾಹೆಯವರೆಗೆ 35,307 ಸಾವಿನ ಪ್ರಕರಣಗಳು ನೋಂದಣಿಯಾಗಿದ್ದು, 2019 ರ ಜನವರಿ ಮಾಹೆಯಿಂದ ಜುಲೈ ಮಾಹೆಯವರೆಗೆ 37004 ಸಾವಿನ ಪ್ರಕರಣಗಳು ನೋಂದಣಿಯಾಗಿವೆ. ಪ್ರಸ್ತುತ ವಿವರ ಜನನ-ಮರಣಗಳ ಮುಖ್ಯ ನೋಂದಣಾಧಿಕಾರಿಗಳ ಕಛೇರಿಯ ಈ-ಜನ್ಮ ತಂತ್ರಾಶ್ಮದಲ್ಲಿ ದಾಖಲಿಸಲಾಗಿರುವುದು ಸರಿಯಾಗಿದೆ ತಿಳಿಸಿದ್ದಾರೆ.

ಇತ್ತೀಚೆಗೆ ಮಾದ್ಯಮಗಳಲ್ಲಿ ಪ್ರಸ್ತು ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಹೆಚ್ಚಿನ ಸಾವಿನ ಪ್ರಕರಣಗಳು ನೋಂದಣಿಯಾಗಿವೆ ಎಂದು ವರದಿಯಾಗಿತ್ತು.

2019 ರ ಸಾಲಿನ ವಿವರ ಇಂತಿದೆ:

ಜನವರಿ–5168, ಫೆಬ್ರವರಿ–5766, ಮಾರ್ಚ್–5400, ಏಪ್ರಿಲ್ 4806, ಮೇ–5899, ಜೂನ್–4687 ಹಾಗೂ ಜುಲೈ–5278 ಸೇರಿ ಒಟ್ಟು ಈ 7 ತಿಂಗಳುಗಳಲ್ಲಿ ನೋಂದಣಿಯಾದ ಮರಣ ಸಂಖ್ಯೆ 37004. ಅದೇ 2020 ರ ಸಾಲಿನ ಜನವರಿ–5983, ಫೆಬ್ರವರಿ–5454, ಮಾರ್ಚ್–4716, ಏಪ್ರಿಲ್ 3327, ಮೇ–4469, ಜೂನ್–4881 ಹಾಗೂ ಜುಲೈ–6477 ಆಗಿದ್ದು ಒಟ್ಟು 35307 ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಮರಣ ನೋಂದಣಿ ನಡೆಯುವ ಪ್ರಕ್ರಿಯೆ:

1. ಸಂಸ್ಥೆಯಲ್ಲಾಗುವ ಮರಣಗಳು:

ಸಂಸ್ಥೆಯಲ್ಲಾಗುವ ಮರಣ ನೋಂದಣಿಗಳು ಸಂಸ್ಥೆಯ ಆಡಳಿತ ಮಂಡಳಿಯವರಿಗೆ ಯೂಸರ್ ಐಡಿ ಮತ್ತು ಪಾಸ್ವರ್ಡ್‍ನ್ನು ವಿತರಿಸಿದ್ದು, ಸದರಿಯವರು ತಮ್ಮ ಲಾಗಿನ್‍ನಲ್ಲಿ ನೋಂದಾಯಿಸಿ ಅಪ್ರೂವಲ್ ನೀಡಿದಾಗ ಅದು ಎಮ್.ಓ.ಹೆಚ್ ಲಾಗಿನ್‍ಗೆ ಬರುತ್ತದೆ.

ಎಮ್.ಓ.ಹೆಚ್ ಲಾಗಿನ್‍ಗೆ ಬಮಧ ಮೇಲೆ ನಮ್ಮ ಉಪನೋಂದಣಿದಾರರು ಸಂಸ್ಥೆಯ ಆಡಳಿತ ಮಂಡಳಿಯವರು ನಮೂದು ಮಾಡಿರುವ ಮಾಹಿತಿಯನ್ನು ಸರಿಯಾಗಿದೇಯೇ ಎಂದು ಪರಿಶೀಲಿಸಿ ಅದನ್ನು ಅಪ್ರೂವಲ್ ಮಾಡಿ ಮೃತರ ಕುಂಟುಬಸ್ಥರಿಗೆ ಉಚಿತವಾಗಿ ಒಂದು ಪ್ರತಿಯನ್ನು ನೀಡುತ್ತಾರೆ.

2. ಸಂಸ್ಥೆಯೇತರದಲ್ಲಾಗುವ ಮರಣಗಳು:

ಸಂಸ್ಥೆಯೇತರದಲ್ಲಾಗುವ ಮರಣಗಳಲ್ಲಿ ಮೃತರ ಸಂಬಂಧಿಕರು ನಮೂನೆ–2, ಸ್ಮಶಾನದ ವರದಿ ಮತ್ತು ನಮೂನೆ–4ಎ ಅನ್ನು ಸಲ್ಲಿಸಿದಾಗ ಅದನ್ನು ಉಪನೋಂದಣಿದಾರರು ಪರಿಶೀಲಿಸಿ,ಸ್ಥಳ ಮಹಜರ್ ಮಾಡಿದ ನಂತರ ಮರಣ ನೋಂದಣಿ ಮಾಡಿ ಮೃತರ ಕುಟುಂಬಸ್ಥರಿಗೆ ಉಚಿತವಾಗಿ ಒಂದು ಪ್ರತಿಯನ್ನು ನೀಡುತ್ತಾರೆ.

3. ಎಮ್.ಎಲ್.ಸಿ ಆದ ಪ್ರಕರಣಗಳಲ್ಲಿ:

ಎಮ್.ಎಲ್.ಸಿ ಆದ ಪ್ರಕರಣಗಳಲ್ಲಿ ಪೊಲೀಸ್ ಠಾಣಾಧಿಕಾರಿಗಳು ನೀಡುವ ಎಫ್.ಐ.ಆರ್ ವರದಿ, ನಮೂನೆ–2 ಹಾಗೂ ಸ್ಮಶಾನದ ವರದಿ ಆಧಾರದ ಮೇಲೆ ಉಪನೋಂದಣೆದಾರರು ಪರಶೀಲಿಸಿ ಮರಣ ನೋಂದಣಿ ಮಾಡಿ ಮೃತರ ಕುಟುಂಬಸ್ಥರಿಗೆ ಉಚಿತವಾಗಿ ಒಂದು ಪ್ರತಿಯನ್ನು ನೀಡುತ್ತಾರೆ ಎಂದು ಬೃಹತ್ ಬೆಂಗಳೂರು ಮಹಾಮನಗರ ಪಾಲಿಕೆಯ ಸಾಂಖ್ಯಿಕ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆ.ಜಿ.ಐ.ಡಿ. ಉಪ ನಿರ್ದೇಶಕರಾಗಿ ಪಿ. ಸತೀಶ್ ನೇಮಕ

ಬೆಂಗಳೂರು, ಸೆಪ್ಟೆಂಬರ್ 04, (ಕರ್ನಾಟಕ ವಾರ್ತೆ) :

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ವಾಹನ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಪಿ. ಸತೀಶ್ ಅವರಿಗೆ ಕೇಂದ್ರ ಕಚೇರಿಯ ಉಪ ನಿರ್ದೇಶಕರು-1 ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಛಾಯಾಚಿತ್ರ ಲಗತ್ತಿಸಿದೆ)

## P. SATHEESH APPOINTED DEPUTY DIRECTOR FOR KGID

**Bengaluru, September 4 (Karnataka Information)**

**P. Satheesh, working as Assistant Director in the Karnataka Government Insurance Department has been appointed to officiate as Deputy Director at Head office, according to a Government Notification.**

**PHOTO ATTACHED)**

## ದತ್ತು ಸ್ವೀಕಾರ

ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):

ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಧನವೀರ್ ಗೌಡ ಅವರು ಕಪ್ಪು ಚಿರತೆಯನ್ನು ರೂ. 35,000/- ಪಾವತಿಸಿ ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆಯಡಿ ಸಾಲ ಪಡೆಯಲು ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):

2020-21ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ/ನೀಟ್‌ನಲ್ಲಿ ಆಯ್ಕೆಯಾಗುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅಪೇಕ್ಷಿಸುವ ವಿದ್ಯಾರ್ಥಿಗಳು ನಿಗಮದ ವೆಬ್‌ಸೈಟ್ *kmdc.kar.nic.in/Arivu2*"*ಆನ್‌ಲೈನ್*"ಮುಖಾಂತರ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 18.09.2020. ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಕ್ರೋಢೀಕೃತ ಮಾಹಿತಿಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ: 20.09.2020.

ಅರಿವು ವೆಬ್ ಸೈಟ್*kmdc.kar.nic.in/Arivu2*ನಲ್ಲಿ ವಿದ್ಯಾರ್ಥಿಗಳು "*ಆನ್ ಲೈನ್*" ಮುಖಾಂತರ ಅರ್ಜಿ ಸಲ್ಲಿಸಿ ಅದರ ಹಾರ್ಡ್ ಕಾಪಿಗಳನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ವಿಶ್ವೇಶ್ವರಯ್ಯ ಕೇಂದ್ರ 12 ನೇ ಮಹಡಿ, ಮುಖ್ಯ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು –1 ದೂರವಾಣಿ 22864782 ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ.

ಬೆಂಗಳೂರು ನಗರ ಹಾಗೂ ಉತ್ತರ ವಿಭಾಗಕ್ಕೆ ಸಂಬಂಧಪಟ್ಟವರು 40, 4 ನೇ ಮುಖ್ಯ ರಸ್ತೆ, 2 ನೇ ಅಡ್ಡ ರಸ್ತೆ, ವಸಂತಪ್ಪ ಬ್ಲಾಕ್, ಗಂಗಾನಗರ, ಬೆಂಗಳೂರು –32 ಹಿಯರಿಂಗ್ ಕ್ಲಿನಿಕ್ ಎದುರು, ನೂರ್ ಮಸೀದಿ ಹತ್ತಿರ ಬೆಂಗಳೂರು –32 ದೂರವಾಣಿ 23539786 ಸಂಪರ್ಕಿಸಬಹುದಾಗಿದೆ.

ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರ ಕಛೇರಿಗೆ ಸಲ್ಲಿಸುವ ಕೊನೆಯ ದಿನಾಂಕ: 18.9.2020. ಸಿಇಟಿ/ನೀಟ್ ಪರೀಕ್ಷಾ ಪ್ರವೇಶ ಪ್ರತಿ/ ಸಿಇಟಿ ಆರ್ಡರ್ ಪ್ರತಿಗಳನ್ನು ಪಡೆಯಬೇಕು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕರ್ನಾಟಕ ಲಲಿತಾಕಲಾ ಅಕಾಡೆಮಿಯ ವತಿಯಿಂದ ಚಿತ್ರಕಲಾ ಪ್ರದರ್ಶನ

ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):

ಕರ್ನಾಟಕ ಲಲಿತಾಕಲಾ ಅಕಾಡೆಮಿಯು ಉದಯೋನ್ಮುಖ ಕಲಾವಿದರನ್ನು ಉತ್ತೇಜಿಸುವ ದೃಷ್ಠಿಯಿಂದ 2020–21ನೇ ಸಾಲಿನ ಆನ್‌ಲೈನ್ ತಿಂಗಳ ಚಿತ್ರ ಕಲಾಪ್ರಕರ್ಶನವನ್ನು ಮಾಡಲು ನಿರ್ಧರಿಸಿದೆ.

ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ಬಿ.ಬಿ.ಎ/ಬಿ.ಎಫ್.ಎ/ಎಂ.ಎಫ್.ಎ./ಎಂ.ವಿ.ಎ ಇತರೆ ಯಾವುದೇ ಚಿತ್ರಕಲಾಶಿಕ್ಷಣಕ್ಕೆ ಸಂಬಂಧಪಟ್ಟ ವಿದ್ಯಾರ್ಹತೆ ಹೊಂದಿರಬೇಕು ಹಾಗೂ ಉದಯೋನ್ಮುಖ ಕಲಾವಿದರು ಕರ್ನಾಟಕದವರಾಗಿದು, ವಯೋಮಿತಿ 18 ರಿಂದ 35 ವರ್ಷ ಒಳಗಿರಬೇಕು. ಆಸಕ್ತಿಯುಳ್ಳ ಕಲಾವಿದರು. ತಮ್ಮ ಪೂರ್ಣ ವಿವರಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಹಾಗೂ "5*7" ಅಳತೆಯ ಮೂರು ಚಿತ್ರಕಲಾಕೃತಿಗಳ ಛಾಯಾಚಿತ್ರಗಳು ಸೇರಿದಂತೆ ಸ್ವವಿವರವುಳ್ಳ (ಬಯೋಡೆಟಾ)ವನ್ನು ದಿನಾಂಕ 19–09–2020 ರ ಒಳಗಾಗಿ ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560002 ಇವರಿಗೆ ಸಲ್ಲಿಸಿ ಸಾಫ್ಟ್ ಕಾಫಿಯನ್ನು ಇ–ಮೇಲ್ ಮುಖಾಂತರ ತಲುಪಿಸಲು ಕೋರಿದೆ. ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್: **www.lalitkalakarnataka.org**. ಸಂಪರ್ಕಿಸಬೇಕೆಂದು ಅಧಿಕೃತ ಪ್ರಕಟಣೆ ತಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರ ಜಗದೀಶ ಶೆಟ್ಟರ್ ಅವರು 5ನೇ ಸೆಪ್ಟಂಬರ್ 2020ರಂದು ಹುಬ್ಬಳ್ಳಿ ಪ್ರವಾಸ ಕೈಗೊಳ್ಳುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):**

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ. ಗೋಪಾಲಯ್ಯ ಅವರು 5ನೇ ಸೆಪ್ಟಂಬರ್ 2020ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು 7ನೇ ಸೆಪ್ಟಂಬರ್ 2020ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬಸವರಾಜ ಕಟ್ಟೀಮನಿ ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟಂಬರ್ 04(ಕರ್ನಾಟಕ ವಾರ್ತೆ):**

2019ರಲ್ಲಿ ಪ್ರಕಟವಾದ ಕಾದಂಬರಿ ಮತ್ತು ಕಥಾ ಸಾಹಿತ್ಯಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಬಸವರಾಜ ಕಟ್ಟೀಮನಿ ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿಯು 10 ಸಾವಿರ ರೂಪಾಯಿ ಹಾಗೂ ಫಲಕವನ್ನು ಹೊಂದಿದೆ. 40 ವರ್ಷಗಳ ಒಳಗಿನವರು ಇದರಲ್ಲಿ ಭಾಗವಹಿಸಬಹುದು. ಲೇಖಕರು ನಾಲ್ಕು ಪ್ರತಿಗಳನ್ನು ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಕುಮಾರಗಂಧರ್ವ ಕಲಾಮಂದಿರ ಆವರಣ ಹೊಸ ಮಹಾನಗರ ಪಾಲಿಕೆ ಎದುರು ಸುಭಾಷ್ ನಗರ ಬೆಳಗಾವಿ–590016 ಈ ವಿಳಾಸಕ್ಕೆ ಸೆಪ್ಟಂಬರ್ 16, 2020ರ ಒಳಗಾಗಿ ತಲುಪುವಂತೆ ಕಳುಹಿಸಬೇಕು. ಇದು ಲೇಖಕರ ಸ್ವತಂತ್ರ ಕೃತಿಯಾಗಿರಬೇಕು (ವಯಸ್ಸಿನ ದೃಢೀಕರಣ ಕಡ್ಡಾಯ) ಕಥೆ ಮತ್ತು ಕಾದಂಬರಿ ಎರಡೂ ವಿಭಾಗಗಳಲ್ಲಿ

ಲೇಖಕರು ಭಾಗವಹಿಸಬಹುದು. ಪ್ರೊ ಮಲ್ಲಿಕಾರ್ಜುನ ಹಿರೇಮಠ, ಅಧ್ಯಕ್ಷರು ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.